ದೂರವಾಣಿ ಸಂಖ್ಯೆ: 080–22212343
ಫ್ಯಾಕ್ಸ್ ಸಂಖ್ಯೆ: 080–22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿಸಿ025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009)**

**ಸಂಖ್ಯೆ: ಕವಿಪ್ರನಿನಿ/ಬಿ16/5607(II)/2000–2001** **ದಿನಾಂಕ:** 12 JUN 2020

## ಸುತ್ತೋಲೆ

**ವಿಷಯ:** ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಯ ಕ್ರಮ ಸಂಖ್ಯೆ: 12 (ಬಿ)(1) ಅಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ಸ್ಪಷ್ಟೀಕರಣ.

**ಉಲ್ಲೇಖ:** ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/5607(II)/2000–2001, ದಿನಾಂಕ: 07.05.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/5607(II)/2000–2001, ದಿನಾಂಕ: 07.05.2020 ರಲ್ಲಿ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ಕ್ರಮ ಸಂಖ್ಯೆ 12 (ಬಿ) (1) ರಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಪದೋನ್ನತಿಗೆ ನಿಗಧಿಪಡಿಸಿರುವ ಕನಿಷ್ಟ ಅರ್ಹತೆ ಹಾಗೂ ನೇಮಕಾತಿ ವಿಧಾನಕ್ಕೆ ತಿದ್ದುಪಡಿಯನ್ನು ಮಾಡಲಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ನೇಮಕಾತಿ ಪ್ರಾಧಿಕಾರಿಗಳಿಗೆ ಉಂಟಾಗಬಹುದಾದ ಕೆಲವು ಸಂದೇಹ/ಗೊಂದಲಗಳನ್ನು ನಿವಾರಿಸಲು ಹಾಗೂ ಎಲ್ಲಾ ವೃತ್ತಗಳಲ್ಲಿ ಬಡ್ತಿ ನೀಡುವಾಗ ಏಕರೂಪತೆ ಅನುಸರಿಸುವ ದೃಷ್ಟಿಯಿಂದ, ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಲು ಸೂಚಿಸಿದೆ:–

1. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ಕ್ರಮ ಸಂಖ್ಯೆ 12 (ಬಿ) (1) ರಡಿಯಲ್ಲಿ ಕಿರಿಯ ಇಂಜಿನಿಯರ್ (ವಿ) ಹುದ್ದೆಗೆ ಬಡ್ತಿ ಬಯಸುವ ನೌಕರರು ಕಿರಿಯ ಇಂಜಿನಿಯರ್(ವಿ) ಹುದ್ದೆಗಿಂತ ಯಾವುದೇ ಪದವೃಂದದ ಕೆಳಮಟ್ಟದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸತಕ್ಕದ್ದು.

   **ಉದಾ:–** ಕಾವಲುಗಾರ, ಮಾಲಿ ದರ್ಜೆ–2, ಕಿರಿಯ ಮಾಪಕ ಓದುಗ, ಕಿರಿಯ ಪವರ್‌ಮ್ಯಾನ್, ಕಿರಿಯ ಸ್ಟೇಷನ್ ಪರಿಚಾರಕ, ದಫ್ತರಿ, ಕಿರಿಯ ಸಹಾಯಕ, ಸಹಾಯಕ, ಇತ್ಯಾದಿ.

2. ಸದರಿ ಕೋಟಾದಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಬಡ್ತಿಗೆ ಅರ್ಹರಾಗಲು, ಮಾಪಕ ಓದುಗ/ಓವರ್‌ಸೀಯರ್/ಆಪರೇಟರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಗಳನ್ನು ಒಳಗೊಂಡಂತೆ, ಕಿರಿಯ ಇಂಜಿನಿಯರ್ (ವಿ.) ಹುದ್ದೆಗಿಂತ ಕೆಳಗಿನ ಹಂತದ ಹುದ್ದೆಗಳಲ್ಲಿ ಈಗಾಗಲೇ ಎಲೆಕ್ಟ್ರಿಕಲ್/ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವವರು ಮತ್ತು ದಿನಾಂಕ: 11.03.2020 ರೊಳಗೆ ಎಲೆಕ್ಟ್ರಾನಿಕ್ ಮತ್ತು ಕಮ್ಯೂನಿಕೇಷನ್‌ನಲ್ಲಿ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವ ನೌಕರರು, ಕಾರ್ಯನಿರ್ವಾಹಕ ಕಿರಿಯ ಪರೀಕ್ಷೆ ತೆಗೆದುಕೊಳ್ಳಬಹುದಾಗಿದೆ.

3. ಸದರಿ ಕೋಟಾದಡಿಯಲ್ಲಿ ಬಡ್ತಿಗೆ ಕಿರಿಯ ಇಂಜಿನಿಯರ್(ವಿ) ಹುದ್ದೆಗಳು ಲಭ್ಯವಿದ್ದಲ್ಲಿ, ನಿಗಮದ ದಿನಾಂಕ 07.05.2020 ರ ಆದೇಶದಲ್ಲಿ ನಿಗಧಿಪಡಿಸಿರುವ ಎಲ್ಲಾ ಕನಿಷ್ಟ ಅರ್ಹತೆಗಳನ್ನು ಪೂರೈಸಿರುವಂತಹ ನೌಕರರನ್ನು ಬಡ್ತಿಗೆ ಜೇಷ್ಟತೆ ಮತ್ತು ಯೋಗ್ಯತೆ ಆಧಾರದ ಮೇಲೆ ಪರಿಗಣಿಸಬಹುದಾಗಿದೆ ಹಾಗೂ ನೌಕರರು ಒಟ್ಟಾರೆ 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರತಕ್ಕದ್ದು.

4. ಸದರಿ ಕೋಟಾದನ್ವಯ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಬಡ್ತಿಗೆ ಪರಿಗಣಿಸುವಾಗ, ಒಟ್ಟು ಸೇವಾವಧಿಯನ್ನು ಪದೋನ್ನತಿಗೆ ಪರಿಗಣಿಸಬೇಕಿರುತ್ತದೆ ಮತ್ತು 10 ವರ್ಷಗಳ ಸೇವಾವಧಿಯನ್ನು Date of entry into service ನಿಂದ ಪರಿಗಣಿಸುವುದು.

5. ಈ ಕೋಟಾದಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಬಡ್ತಿಗೆ ಪರಿಗಣಿಸುವಾಗ, AICTE, ನವದೆಹಲಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಅನುಮೋದಿತವಾದ ಪಾಲಿಟೆಕ್ನಿಕ್‌ನಿಂದ ಪಡೆದಿರುವ ಪೂರ್ಣಾವಧಿ ಡಿಪ್ಲೊಮಾ, ಬಾಹ್ಯ ಮೂಲಕ ಪಡೆದಿರುವ ಡಿಪ್ಲೊಮಾ (External Diploma) ಹಾಗೂ ಸಂಜೆ ವೇಳೆಯಲ್ಲಿ ನಡೆಸುವ ಪಾಲಿಟೆಕ್ನಿಕ್‌ಗಳಿಂದ ಪಡೆದಿರುವ ಡಿಪ್ಲೊಮಾ ವಿದ್ಯಾರ್ಹತೆಯನ್ನು ಮಾತ್ರ ಪರಿಗಣಿಸಲಾಗುವುದು (ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯ ದಿನಾಂಕ: 05.06.2020 ರ ಪತ್ರದ ಪ್ರತಿಯನ್ನು ಲಗತ್ತಿಸಿದೆ).

   **<u>ಸೂಚನೆ:</u>** ದೂರಶಿಕ್ಷಣದ ಮೂಲಕ, ಅಂಚೆ ತೆರಪಿನ ಶಿಕ್ಷಣ ಮೂಲಕ, ಮುಕ್ತ ವಿಶ್ವವಿದ್ಯಾಲಯಗಳ ಮೂಲಕ, ಬೇರೆ ರಾಜ್ಯದ ವಿಶ್ವವಿದ್ಯಾಲಯ/ವಿದ್ಯಾಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿನ ವಿವಿಧ ಸ್ಥಳಗಳಲ್ಲಿ ನಡೆಸುವ ಅಧ್ಯಯನ ಕೇಂದ್ರಗಳ (Study Centres) ಮೂಲಕ ಪಡೆದ ಡಿಪ್ಲೊಮಾ ಹಾಗೂ AICTE ಮಾನ್ಯತೆ ಹೊಂದಿರದ ಇತರೆ ಡಿಪ್ಲೊಮಾ ವಿದ್ಯಾರ್ಹತೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

6. ಈ ಕೋಟಾದಡಿಯಲ್ಲಿ ಸೇವಾವಧಿಯನ್ನು ಪರಿಗಣಿಸುವಾಗ, ಪ್ರೊಬೇಷನರಿ ಮಜ್ದೂರ್ ಹುದ್ದೆಯಿಂದ ಕಿರಿಯ ಪವರ್‌ಮ್ಯಾನ್ ಹುದ್ದೆಗೆ ವಿಲೀನಗೊಂಡ ದಿನಾಂಕದಿಂದ 10 ವರ್ಷಗಳ ಸೇವೆಯನ್ನು ಪರಿಗಣಿಸಲಾಗುವುದು. ಕಿರಿಯ ಪವರ್‌ಮ್ಯಾನ್/ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗೆ 3 ವರ್ಷಗಳ ತರಬೇತಿ ಮೇರೆಗೆ ನೇರ ನೇಮಕಾತಿ ಹೊಂದಿರುವಂತಹ ನೌಕರರು, ಅವರು 3 ವರ್ಷ ತರಬೇತಿ ಅವಧಿ ಪೂರ್ಣಗೊಳಿಸಿದ ನಂತರ, ಪರೀಕ್ಷಾರ್ಥ ಅವಧಿಗೆ ನೇಮಕಗೊಂಡ ದಿನಾಂಕದಿಂದ 10 ವರ್ಷಗಳ ಸೇವೆಯನ್ನು ಪರಿಗಣಿಸಲಾಗುವುದು.

7. ಈ ಕೋಟಾದಡಿಯಲ್ಲಿ, ನಿಗಮದಿಂದ ನಿರಾಕ್ಷೇಪಣಾ ಪತ್ರ ಪಡೆದು ಡಿಪ್ಲೊಮಾ ಪದವಿ ಪಡೆದಿರುವ ನೌಕರರು ಹಾಗೂ ಕೆಲಸಕ್ಕೆ ಸೇರುವ ಮೊದಲೇ ಡಿಪ್ಲೊಮಾ ಪದವಿ ಪಡೆದಿರುವ ನೌಕರರನ್ನು ಪರಿಗಣಿಸಬಹುದಾಗಿರುತ್ತದೆ.

8. ಸದರಿ ಕೋಟಾದಡಿಯಲ್ಲಿ ಬಡ್ತಿ ಬಯಸುವ ಅಭ್ಯರ್ಥಿಗಳ ಡಿಪ್ಲೊಮಾ ಪ್ರಮಾಣಪತ್ರ ಹಾಗೂ ಅಂಕಪಟ್ಟಿಗಳ ನೈಜತೆಯನ್ನು ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಪಡೆಯುವುದು ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ್(ವಿ) ರವರ ಕರ್ತವ್ಯವಾಗಿರುತ್ತದೆ.

   ಅಭ್ಯರ್ಥಿಗಳ ಡಿಪ್ಲೊಮಾ ಪ್ರಮಾಣಪತ್ರ ಹಾಗೂ ಅಂಕಪಟ್ಟಿಗಳ ನೈಜತೆಯನ್ನು ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳಿಂದ ಪರಿಶೀಲಿಸಿದ ನಂತರವೇ, ಅರ್ಹ ಅಭ್ಯರ್ಥಿಗಳಿಗೆ ಕಾರ್ಯನಿರ್ವಾಹಕ ಕಿರಿಯ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವನ್ನು ಕಲ್ಪಿಸಬೇಕಿರುತ್ತದೆ.

   ಆದಾಗ್ಯೂ, ಎಕ್ಸಿಕ್ಯೂಟಿವ್ ಲೋಯರ್ ಪರೀಕ್ಷೆಗೆ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸಿರುವುದರಿಂದ, ಈ ಬಾರಿ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ನೌಕರರು ಮತ್ತು ಈಗಾಗಲೇ ಎಕ್ಸಿಕ್ಯೂಟಿವ್ ಲೋವರ್ ಪರೀಕ್ಷೆ ತೇರ್ಗಡೆ ಹೊಂದಿರುವಂತಹ ನೌಕರರ ಪ್ರಕರಣಗಳಲ್ಲಿ ಡಿಪ್ಲೊಮಾ ಪ್ರಮಾಣಪತ್ರ ಹಾಗೂ ಅಂಕಪಟ್ಟಿಗಳ ನೈಜತೆಯನ್ನು ಕೂಡಲೇ ಪಡೆಯಲು ನೇಮಕಾತಿ ಪ್ರಾಧಿಕಾರಿಗಳು ಸೂಕ್ತ ಕ್ರಮವಹಿಸುವುದು ಮತ್ತು ಈ ಬಾರಿಯ ಎಕ್ಸಿಕ್ಯೂಟಿವ್ ಲೋಯರ್ ಪರೀಕ್ಷೆ ಫಲಿತಾಂಶ ಪ್ರಕಟಗೊಳ್ಳುವ ಮುನ್ನ ಡಿಪ್ಲೊಮಾ ಪ್ರಮಾಣಪತ್ರ ಹಾಗೂ ಅಂಕಪಟ್ಟಿಗಳ ನೈಜತೆಯನ್ನು ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ್(ವಿ) ರವರುಗಳು ದೃಢೀಕರಿಸಿಕೊಳ್ಳತಕ್ಕದ್ದು ಹಾಗೂ ಸದರಿ ದೃಢೀಕರಣಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ನೌಕರರಿಂದ ಭರಿಸಿಕೊಳ್ಳತಕ್ಕದ್ದು. ನಿಗದಿಪಡಿಸಿರುವ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳು ನಕಲಿ/ತಪ್ಪು/ಸುಳ್ಳು ಎಂದು

ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ, ನೌಕರರ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯಲಾಗುವುದು ಹಾಗೂ ಸಕ್ಷಮ ಪ್ರಾಧಿಕಾರಿಗಳು ಸದರಿ ನೌಕರರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲು ಕ್ರಮ ಕೈಗೊಳ್ಳಬಹುದಾಗಿದೆ.

**"ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿರುತ್ತದೆ"**

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

   www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/136/ಇಸಿಎಸ್(3)/2019

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 05-06-2020

ಇವರಿಗೆ,
ನಿರ್ದೇಶಕರು,
(ಆಡಳಿತ ಮತ್ತು ಮಾನವ ಸಂಪನ್ಮೂಲ)
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು -560009

ಮಾನ್ಯರೇ,

ವಿಷಯ: ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಿರಿಯ ಇಂಜಿನಿಯರ್ (ವಿ) ಹುದ್ದೆಯ ಪದನ್ನೋತಿಗೆ ಸಂಜೆ ವೇಳೆಯ ಪಾಲಿಟೆಕ್ನಿಕ್, ದೂರ ಶಿಕ್ಷಣ ಮತ್ತು ಮುಕ್ತ ವಿಶ್ವವಿದ್ಯಾಲಯ ಮೂಲಕ ಪಡೆಯುವ ಡಿಪ್ಲೋಮ ಪದವಿಯ ಸಮಾನತೆ ಬಗ್ಗೆ,

ಉಲ್ಲೇಖ: ಕವಿಪ್ರನಿನಿ/ಬಿ16/5607(II) /2000-2001 ದಿ:18/05/2020

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ತಮ್ಮ ಪತ್ರಕ್ಕೆ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

All India Council for Technical Education, New Delhi ಮತ್ತು ರಾಜ್ಯ ಸರ್ಕಾರದಿಂದ ಅನುಮೋದಿತವಾದ ಪಾಲಿಟೆಕ್ನಿಕ್‌ಗಳಿಂದ ಪಡೆದಿರುವ External Diploma ಪದವಿ ಹಾಗೂ ಸಂಜೆ ವೇಳೆ ಪಾಲಿಟೆಕ್ನಿಕ್‌ನಿಂದ ಪಡೆದ ಡಿಪ್ಲೋಮ ಪದವಿ ವಿದ್ಯಾರ್ಹತೆಯ ಪೂರ್ಣಾವಧಿ ಡಿಪ್ಲೋಮ (Full Time) ಗೆ ಸಮಾನವಾಗಿರುತ್ತವೆ.

AICTE, New Delhi ಇವರ ಸಾರ್ವಜನಿಕ ಪ್ರಕಟಣೆ ಸಂಖ್ಯೆ: UB/02/(02)/2010 (ಲಗತ್ತು) ರ ಪ್ರಕಾರ, ಇಂಜಿನಿಯರಿಂಗ್/ ಟೆಕ್ನಾಲಜಿ ಕ್ಷೇತ್ರಗಳಲ್ಲಿ ದೂರ ಶಿಕ್ಷಣ ಮಾಧ್ಯಮದ ಮೂಲಕ ಪಡೆದ ಡಿಪ್ಲೋಮ, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಹತೆಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, (ಎಐಸಿಟಿಇ), ನವದೆಹಲಿ ಇವರ ಮಾನ್ಯತೆ ಇರುವುದಿಲ್ಲವೆಂದು ಪ್ರಕಟಿಸಲಾಗಿದೆ. ಪ್ರತಿಯನ್ನು ಲಗತ್ತಿಸಿದೆ.

ಈ ಹಿನ್ನೆಲೆಯಲ್ಲಿ ಪೂರ್ಣಾವಧಿ ಪಾಲಿಟೆಕ್ನಿಕ್ ಡಿಪ್ಲೋಮ, ಸಂಜೆ ಪಾಲಿಟೆಕ್ನಿಕ್ ಡಿಪ್ಲೋಮ ಮತ್ತು ಬಾಹ್ಯ ಡಿಪ್ಲೋಮ ಕೋರ್ಸ್‌ಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ, ಎಐಸಿಟಿಇ ಮಾನ್ಯತೆ ಹೊಂದಿದ ಸಂಸ್ಥೆಗಳು ನಡೆಸುತ್ತಿದ್ದು ಸಮಾನವಾಗಿರುತ್ತವೆ. ಆದರೆ ದೂರ ಶಿಕ್ಷಣ/ ಮುಕ್ತ ವಿಶ್ವವಿದ್ಯಾನಿಲಯಗಳು ಎಐಸಿಟಿಇ, ನವದೆಹಲಿ ಇವರ ಮಾನ್ಯತೆ ಹೊಂದಿರದ ಕಾರಣ ಸಮಾನಂತರವಾಗಿರುವುದಿಲ್ಲ ಎಂದು ತಿಳಿಸಲಾಗಿದೆ.

ತಮ್ಮ ನಂಬುಗೆಯ,

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಅಡಕ: AICTE, New Delhi ಇವರ ಸಾರ್ವಜನಿಕ ಪ್ರಕಟಣೆ ಸಂಖ್ಯೆ: UB/02/(02)/2010

APPENDIX - B

**ALL INDIA COUNCIL FOR TECHNICAL EDUCATION**
**7th floor, Chanderlok Building, Janpath, New Delhi-110001**
**Ph.Nos.23724151-57 Website : www.aicte-india.org**

**Advt.No. : UB / 02(02) / 2010**

# PUBLIC NOTICE

As per Government of India's Gazette Notification No. 44 dated 01.03.1995 issued by Ministry of Human Resources Development (Department of Education), the qualifications acquired by individuals through distance educations mode are recognized for the purpose of employment to posts and services under the Central Government, provided, these have been approved by Distance Education Council (DEC)-Indira Gandhi National Open University (IGNOU), New Delhi and wherever necessary by All India Council for Technical Education (AICTE), New Delhi. The technical education programmes, which fall under the purview of AICTE are in the fields of Engineering , Technology including MCA, Architecture, Town Planning, Management, Pharmacy, Hotel Management & Catering Technology, Applied Arts & Crafts and such other programme and areas as notified by the Council from time to time, with the approval of the Government.

It has been the policy of the AICTE, not to recognize the qualifications acquired through distance education mode at Diploma, Bachelors & Master's level in the fields of Engineering , Technology including MCA, Architecture, Town Planning, Pharmacy, Hotel Management & Catering Technology, Applied Arts & Crafts and Post Graduate Diploma in Management (PGDM). AICTE has the policy to consider only MBA and MCA through distance mode for its recognition. **All the existing students / prospective students pursuing/ wanting to pursue any educational programme in the above mentioned fields are hereby advised to check the approval by Joint Committee of DEC, UGC and AICTE on AICTE's web portal at www.aicte-india.org.** In the absence of the said approval the MBA & MCA qualifications acquired through distance mode may not be recognized for the purpose of employment under Central Government.

**MEMBER SECRETARY**